ನಾನು ಪ್ರಿಯಕಾರಿಣಿಯನ್ನು ನೋಡದೇ ಹತ್ತಾರು ವರ್ಷಗಳಾದವು. ಡಿಗ್ರಿಯಲ್ಲೇ ಕೊನೆಯದಾಗಿ ಅವಳ ನಗುವನ್ನು ನೋಡಿದ್ದು, ಆ ಮೇಲೆ ಅವಳನ್ನು ನಾನು ಕಂಡೇ ಇಲ್ಲ. ಆದರೆ ಆಗಾಗ ಅವಳನ್ನು ಕಾಣಬೇಕು ಮಾತಾಡಬೇಕು ಎಂದು ಹಂಬಲಸುತ್ತಿದ್ದೆ. ಅವಳ ರೂಪವನ್ನೇ, ಅವಳಂತೆ ಕಾಣುತ್ತಿದ್ದ ಬೇರೆ ಹುಡುಗಿಯರಲ್ಲಿ ಕಂಡು ಮುದಪಟ್ಟುಕೊಳ್ಳುತ್ತಿದ್ದರೂ ನಾನು ಬಯಸಿದ್ದು ಬೇರೆ ಹುಡುಗಿಯರನ್ನಲ್ಲ, ಪ್ರಿಯಕಾರಿಣಿಯನ್ನೇ. ಆದರೂ ಅವಳು ಮತ್ತೆಂದೂ ಸಿಗಲಿಲ್ಲ. ಈಗ ಅದು ಹೇಗೆ ಅವಳು ನನ್ನ ಕನಸಿಗೆ ಬಂದಳು? ಎಂದು ವೇಣುಗೋಪಾಲ ಯೋಚಿಸುತ್ತಲೇ ಇದ್ದ.

ಅವನಿಗೆ ಕನಸುಗಳ ಬಗ್ಗೆ ಯಾವತ್ತೂ ಕುತೂಹಲವೇ. ವಾಸ್ತವದಲ್ಲಿ ಬಯಸುವುದನ್ನು ಕನಸಲ್ಲಿ ಪಡೆಯುತ್ತೇವೆಯೇ? ನಮ್ಮೊಳಗೆ ಸುಪ್ತವಾಗಿ ಹುಟ್ಟಿರುವ ಬಯಕೆ ಕನಸಲ್ಲಿ ನನಸಾಗುತ್ತದೆಯೇ? ಅಥವಾ ಯಾವತ್ತೋ ಸುಖ ಕೊಟ್ಟಿದ್ದ ವಸ್ತುವೊಂದನ್ನು ಮತ್ತೆ ಮತ್ತೆ ನೆನಪು ಮಾಡುವುದಕ್ಕೋಸ್ಕರವಾಗಿ ಎಷ್ಟೋ ಕಾಲದ ಬಳಿಕ ಕನಸು ವಾಸ್ತವದಂತೆ ಕಾಡುತ್ತದೆಯೇ? ಎಂದೆಲ್ಲಾ ವೇಣುಗೋಪಾಲ ಚಿಂತಿಸುತ್ತಿದ್ದ. ಕಂಡ ಕನಸನ್ನು ಕನಸೆಂದು ಮರೆತು ಬಿಡುವುದು, ಅದೊಂದು ಸಾಮಾನ್ಯ ಪ್ರಕ್ರಿಯೆ ಎಂದು ಗಂಭೀರವಾಗಿ ತೆಗೆದುಕೊಳ್ಳದೇ ಇರುವುದು ಅವನ ಜಾಯಮಾನವಾಗಿರಲಿಲ್ಲ. ಒಂದೊಂದು ಕನಸನ್ನು ಅಳೆದು ತೂಗುತ್ತಿದ್ದ. ಕೆಲವೊಮ್ಮೆ ಒಳ್ಳೊಳ್ಳೆ ಕನಸುಗಳನ್ನು ಬರೆದಿಡುತ್ತಿದ್ದ. ಕನಸಿನಲ್ಲಿ ಕಂಡ ಚಿತ್ರಗಳನ್ನು ತನ್ನದೇ ಶೈಲಿಯಲ್ಲಿ ಹಾಳೆಗಳಲ್ಲಿ ಬಿಡಿಸುತ್ತಿದ್ದ.

ಅವನಿಗೆ ಕನಸಿನಲ್ಲಿ ಹೊಸ ಹೊಸ ಸಂಗತಿಗಳು ಹೊಳೆಯುತ್ತಿದ್ದವು. ಆದರೆ ಇಂತಹ ರೋಮಾಂಚಕ ಸುಖದ ಕನಸುಗಳು ಅವನಿಗೆ ಬಿದ್ದಿರಲೇ ಇಲ್ಲ. ಅದೂ ಹೆಂಡತಿ ಪಕ್ಕವಿರುವಾಗ ಇಂತಹ ಶೃಂಗಾರದ ಕನಸುಗಳು ಬೀಳುತ್ತೆಂದರೆ? ಅವನಿಗೆ ಆಶ್ಚರ್ಯವಾಯಿತು. ವೇಣುಗೋಪಾಲನಿಗೆ ಮದುವೆಯಾಗಿ ಎರಡು ವರ್ಷವಾದದ್ದಷ್ಟೇ. ಈಗ ಅವನಿಗೆ 35 ರ ಹರಯ. ತನಗೆ ಪ್ರೇಮವಿವಾಹವೇ ಆಗಬೇಕು, ಹುಡುಗಿಯೇ ತನ್ನ ಬಳಿ ಬರಬೇಕು ಎಂದು ಒಳಗೊಳಗೇ ಪಟ್ಟುಹಿಡಿದಿದ್ದ ವೇಣುಗೋಪಾಲನಿಗೆ ಪೋಸ್ಟ್ ಗ್ರಾಜುಯೇಷನ್ ಓದುವವರೆಗೂ ಯಾವ ಹುಡುಗಿಯೂ ಹಚ್ಚಿಕೊಳ್ಳಲಿಲ್ಲ. ಡಿಗ್ರಿಯಲ್ಲಿ ಕೆಲವು ಹುಡುಗಿಯರ ಮೇಲೆ ಕಣ್ಣು ಬಿದ್ದರೂ ವ್ಯಕ್ತಪಡಿಸಲಾಗದೇ ಸೋತುಹೋಗಿದ್ದ.

ಆದರೆ ಇವನಿಗಿಂತ ಒಂದು ವರ್ಷ ಜ್ಯೂನಿಯರ್ ಆಗಿದ್ದ ಪ್ರಿಯಕಾರಿಣಿಯನ್ನು ನೋಡುವಾಗೆಲ್ಲ ಇವನ ಎದೆಯ ಮಿದುವಿನಲ್ಲಿ ಪಾರಿಜಾತ ಪುಷ್ಪ ಬಿದ್ದಂತಾಗುತ್ತಿತ್ತು. ಅವಳು ಇವನ ಪಕ್ಕ ಸರಿದುಹೋದರೆ ಮಿಂಚೇ ಮೂಡಿದಂತಾಗುತ್ತಿತ್ತು. ಆದರೂ ಅವಳ ಬಳಿ ಒಂದಿನಾನೂ ಇವನು ಮಾತನಾಡಿದವನಲ್ಲ. ಆದರೆ ಇಬ್ಬರೂ ಆಗಾಗ ತಮ್ಮ ಕಣ್ಣುಗಳನ್ನು ಪರಸ್ಪರ ಸಂಧಿಸುತ್ತಿದ್ದರು. ಮಾತನಾಡದಿದ್ದರೂ ಒಂದು ಅವ್ಯಕ್ತ ನೋಟದಲ್ಲಿ ಮಾತಿಗಿಂತಲೂ ಜಾಸ್ತಿ ಹಚ್ಚಿಕೊಳ್ಳುತ್ತಿದ್ದರು. ಕ್ರಮೇಣ ಅವಳು ಇವನನ್ನು ನೋಡುವುದನ್ನೇ ಬಿಟ್ಟುಬಿಟ್ಟಳು. ಅವಳ ನೋಟ ಸಿಗದೇ ಇವನು ಕೆಲವು ಕಾಲ ತತ್ತರಿಸಿದನಾದರೂ ನೋಟದಲ್ಲಿ ಹೊಟ್ಟೆ ತುಂಬುತ್ತದಾ? ಅವೆಲ್ಲಾ ವಯೋಸಹಜ ಕಾಮನೆಗಳು ಎಂದು ತಾನೂ ನೋಡುವುದನ್ನೇ ಬಿಟ್ಟುಬಿಟ್ಟ. ಹೀಗೇ ಅವನ ಪದವಿ ಬದುಕು ಕಳೆದುಹೋಯ್ತು. ಪದವಿ ಕಳೆದ ಮೇಲೆ ಸ್ನಾತಕೋತ್ತರವೂ ಹಾಗೇ ಹೊಸತೇನೂ ನಾವೀನ್ಯತೆ ಇಲ್ಲದೇ ಕಳೆದೇಹೋಯಿತು. ಮುಂದೆ ವೇಣುಗೋಪಾಲ ಮಂಗಳೂರಿನ ದೊಡ್ಡ ಸಂಸ್ಥೆಯೊಂದರಲ್ಲಿ ಗ್ರಾಫಿಕ್ ಡಿಸೈನರ್ ನೌಕರಿ ಹಿಡಿದ. ವಯಸ್ಸು ಮೀರುತ್ತಿದೆ ಎನ್ನುವುದನ್ನೂ ಕೆಲಸದಲ್ಲಿ ಮರೆತ, ಪ್ರೇಮವಿವಾಹವಾಗಬೇಕು ಎನ್ನುವ ಅವನ ನಿರ್ಧಾರ ಒಳಗೊಳಗೇ ಆರಿಹೋದದ್ದು ಅವನಿಗೇ ಗೊತ್ತಾಗಲಿಲ್ಲ.

ಕೆಲವೊಮ್ಮೆ ಅದು ಅವನಿಗೆ ನೆನಪಾಗಿದೆಯಾದರೂ ತನಗೆ ತಕ್ಕ ಸಂಗಾತಿ ಹುಡುಕುವುದು ಕಷ್ಟದ ವಿಚಾರ, ಅದೆಲ್ಲಾ ಆಗಿಹೋಗುವ ಕೆಲಸವಲ್ಲ ಎನ್ನುವ ಅರಿವಾಗಿ ಸುಮ್ಮನಾದ. ಗಂಡನನ್ನು ಕಳೆದುಕೊಂಡು ವೇಣುಗೋಪಾಲನನ್ನು ಸಾಕಿದ್ದ ಅವನಮ್ಮ ಪುತ್ತೂರಿನ ದೂರದ ಸಂಬಂಧಿಕರ ಕಡೆಯ ಹುಡುಗಿಯಾದ ಗಂಗೋತ್ರಿಯನ್ನು ಇವನಿಗೆ ಮದುವೆ ಮಾಡಿಸಿಬಿಟ್ಟರು. ಚತುರಮತಿಯಾದ ಗಂಗೋತ್ರಿ ಇವನನ್ನು ಚೆನ್ನಾಗಿಯೇ ನೋಡಿಕೊಂಡಳು. ಆದರೆ ಇವನೇನಾದರೂ ಚೂರು ಬೇಜಾರು ಮಾಡಿದರೂ ಸಾಕು ಅತ್ತುಬಿಡುತ್ತಿದ್ದಳು. ಭಾವನಾತ್ಮಕ ಹುಡುಗಿಯಾದ ಆಕೆಯ ಜೊತೆ ವೇಣುಗೋಪಾಲ ಚೆನ್ನಾಗಿಯೇ ಹೊಂದಿಕೊಂಡಿದ್ದರೂ, ನಂಗೆ ಬೇಕಾದ ಹುಡುಗಿಯನ್ನು ನಾನೇ ಹುಡಕಬೇಕಿತ್ತು. ಹರೆಯದಲ್ಲಿ ಪ್ರೀತಿಸಿದ ಹುಡುಗಿಯ ಜೊತೆ ಜೀವನ ಪೂರ್ತಿ ಬದುಕುವ ಖುಷಿಯೇ ಬೇರೆ ಎಂದು ಆಗಾಗ ವೇಣುಗೋಪಾಲನಿಗೆ ಅನ್ನಿಸುತ್ತಿತ್ತು. ಒಮ್ಮೊಮ್ಮೆ ತಾನು ಯಾವತ್ತೋ ಬರೆದಿದ್ದ ಕವನಗಳು, ತಾನು ತನ್ನ ಕಲ್ಪನೆಯ ಹುಡುಗಿ ಕುರಿತು ಬಿಡಿಸಿದ್ದ ಚಿತ್ರಗಳು ನೆನಪಾಗಿ, ಆ ಕಲ್ಪನೆಯಂತೆ ಗಂಗೋತ್ರಿ ಇಲ್ಲ ಎಂದು ಅಂತ ವ್ಯಥೆಪಟ್ಟುಕೊಳ್ಳುತ್ತಿದ್ದ. ಆ ಚಿತ್ರಗಳನ್ನೂ ಈಗಲೂ ಅವನು ನೋಡಿ ಸುಖಿಸುತ್ತಿದ್ದ. ಸಮಯವಾದಾಗ ಗುಟ್ಟಾಗಿ ಏನೇನೋ ಚಿತ್ರ ಬರೆಯುತ್ತಿದ್ದ. ಆ ಚಿತ್ರಕ್ಕೆ ತನ್ನದೇ ಸಾಲುಗಳನ್ನೂ ಬರೆದು ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳುತ್ತಿದ್ದ.

ಇವನು ಚಿತ್ರ ಬರೆಯುತ್ತಾನೆಂದಾಗಲಿ, ಇವನ ಕಲ್ಪನೆ ಏನು ಎಂದಾಗಲೀ ಗಂಗೋತ್ರಿಗೆ ಗೊತ್ತಿರಲಿಲ್ಲ. ಇಂತಿಪ್ಪ ವೇಣುಗೋಪಾಲನಿಗೆ ಈಗ ಎಂದೋ ತನ್ನ ನೋಡಿ ನಕ್ಕಿದ್ದ ಪ್ರಿಯಕಾರಿಣಿ ಕನಸಲ್ಲಿ ಬಂದಿದ್ದಾಳೆಂದಾಗ ವಿಪರೀತ ಖುಷಿ ಆಯ್ತು. ನಿಜ ಹೇಳಬೇಕೆಂದರೆ ಅವನಿಗೆ ವಾಸ್ತವದಲ್ಲಿ ಗಂಗೋತ್ರಿಯೊಂದಿಗೂ ಇಷ್ಟೊಂದು ಸುಖ ಸಿಕ್ಕಿರಲಿಲ್ಲ. ಅವಳು ತನ್ನನ್ನು ಅಂಟಿಕೊಂಡು ಮಲಗಿದರೆ ಅದು ಸಹಜ ಎನ್ನಿಸುತ್ತಿತ್ತು. ಅವಳ ಮುತ್ತೂ ಕೂಡ ಅಷ್ಟೆ, ಅದೊಂದು ಆಹ್ಲಾದಕರ ಪುಳಕ ಅನ್ನಿಸುತ್ತಲೇ ಇರಲಿಲ್ಲ. ಆದರೆ ಈಗ ಕಣ್ಣಿಗೆ ಕಾಣದ ಪ್ರಿಯಕಾರಿಣಿ ಅನ್ನೋ ಹುಡುಗಿ ಧುತ್ತೆಂದು ಕನಸಿನ ಲೋಕ ಪ್ರವೇಶಿಸಿ ತನ್ನನ್ನು ಸೇರಿ, ತನಗೆ ಎಂದೂ ಆಗದ ಸಂತೃಪ್ತಿ ಕೊಟ್ಟಿದ್ದಾಳಲ್ಲವಾ ಇದು ಹೇಗೆ ಸಾಧ್ಯ? ಎಂದು ಕಿಟಕಿಯಿಂದ ಹೊರಗೆ ಬೀಳುತ್ತಿದ್ದ ಮಳೆಯನ್ನೇ ನೋಡುತ್ತಾ ನಿಂತಾಗ ಅನ್ನಿಸಿತು ವೇಣುಗೋಪಾಲನಿಗೆ. ಅಲ್ಲೇ ಇದ್ದ ಹಾಳೆಯೊಂದನ್ನು ತೆಗೆದು ಕುಂಚಕ್ಕೆ ಬಣ್ಣ ತಾಗಿಸಿ ತಾನು ಕನಸಲ್ಲಿ ಕಂಡಿದ್ದ ಶೃಂಗಾರದ ನೋಟಗಳನ್ನು ಒಂದು ಅಸ್ಪಷ್ಟ ಕನಸಿನಂತೆಯೇ ಬಿಡಿಸಿದ. ಪ್ರಿಯಕಾರಿಣಿಯ ಬಿಂಕ, ತನಗೆ ಸಿಕ್ಕ ಪುಳಕ, ಬೆಟ್ಟದ ಹಸುರು ಎಲ್ಲವೂ ಆ ಚಿತ್ರದಲ್ಲಿ ಮೈದಾಳಿ ನಿಂತಿತ್ತು.

***

ಹೊರಗೆ ಎಲ್ಲೋ ದೂರದಲ್ಲಿ ನಾಯಿ ಕೂಗುತ್ತಿತ್ತು. ಜಿಟಿ ಜಿಟಿ ಮಳೆ ನಿಂತು ಹನಿಗಳು ಮರದ ಎಲೆಗಳ ಮೇಲೆ ಬಿದ್ದು ಸಣ್ಣಗೇ ತೊಟ್ಟಿಕ್ಕುತ್ತಿದ್ದ ಸದ್ದು ಕೇಳಿಸುತ್ತಿತ್ತು. ವೇಣುಗೋಪಾಲ ಗಡಿಯಾರ ನೋಡಿದ ನಸುಕಿನ 5 ಗಂಟೆ. ನಸುಕಿನ ನಿದ್ದೆ ಯಾವತ್ತೂ ಸಿಹಿ ಸಿಹಿ ಎಂದು ಗೊತ್ತಿದ್ದರೂ ಮತ್ತೆ ಹಾಸಿಗೆಗೆ ಹೋಗಲು ಮನಸ್ಸಾಗಲಿಲ್ಲ. ಹೊರಗೆ ಮಳೆ ಬಿಟ್ಟಿದ್ದರಿಂದ ಒಂದು ರೌಂಡ್ ವಿಹಾರ ಹೋಗಬೇಕು ಅನ್ನಿಸುತ್ತಿತ್ತು. ಕೈಗೆಲ್ಲಾ ಮೆತ್ತಿದ್ದ ಕುಂಚದ ಬಣ್ಣಗಳನ್ನು ಬೆರಳಿನಿಂದ ಉಜ್ಜುತ್ತಾ, ಗಂಗೋತ್ರಿ ಏಳಲು ಇನ್ನೊಂದಷ್ಟು ಹೊತ್ತಿದೆ ಎಂದೂ, ಅವಳು ಏಳುವ ಒಳಗೆ ಬರೋಣವೆಂದೂ ಕದವಿಕ್ಕಿ ಕೊಡೆ ಹಿಡಿದು ಹೊರಟೇ ಬಿಟ್ಟ.

ದಾರಿಯೆಲ್ಲಾ ಮಳೆ ನೀರಿನಿಂದ ತೊಯ್ದು ಹೋಗಿತ್ತು. ಜೀರುಂಡೆಗಳು ಇನ್ನೂ ಕೂಗುತ್ತಲೇ ಇದ್ದವು. ಯಾವುದೋ ಮರದ ಒಡಲಿನಿಂದ ಹಕ್ಕಿಗಳ ಹಿತವಾದ ಸದ್ದೂ ಕೇಳಿ ವೇಣುಗೋಪಾಲನಿಗೂ ಹಿತವಾಯ್ತು. ಅವನು ತನಗೆ ಬಿದ್ದ ಕನಸಿಂದ ಮೊದಲೇ ಪ್ರಫುಲ್ಲಿತನಾಗಿದ್ದ. ಈಗ ನಸುಕಿನ ಈ ದಾರಿ ಅವನಿಗೆ ಇನ್ನೊಂದಷ್ಟು ಸ್ಫೂರ್ತಿ ಕೊಟ್ಟಿತು. ಕೊಡೆ ಹಿಡಿದು ಹೀಗೆ ಸಣ್ಣಗೆ ಮಳೆಗೆ ನಡೆದುಕೊಂಡು ಹೋಗುವುದು ಅದೆಷ್ಟು ಸುಖವಲ್ಲಾ ಅನ್ನಿಸಿತು. ಅದರೊಡನೆ ಪ್ರಿಯಕಾರಿಣಿಯ ನೆನಪೂ ಕೂಡ ಆವರಿಸಿ ಅವಳನ್ನು ಕಣ್ಣೆದುರು ತಂದುಕೊಂಡ. ಕಾಲೇಜುದಿನಗಳಲ್ಲಿ ಮಿಂಚಿನಂತಿದ್ದ ಪ್ರಿಯಕಾರಿಣಿ ಈಗ ಹೇಗಿರಬಹುದು? ಎಲ್ಲಿರಬಹುದು? ಯಾರೊಡನಿರಬಹುದು? ಮದುವೆಯಾಗಿರಬಹುದಾ? ಎಂಬಿತ್ಯಾದಿ ಪ್ರಶ್ನೆಗಳನ್ನೆಲ್ಲಾ ಜಿಟಿ ಜಿಟಿ ಮಳೆಯ ಹಿನ್ನೆಲೆಯಲ್ಲಿ ತೇಲಿಹೋದವು. ಅವಳನ್ನು ಕಾಣಬೇಕು, ಅವಳೊಡನೆ ಮಾತಾಡಬೇಕು. ಕನಸಲ್ಲಿ ಕಂಡ ಹಾಗೇ ಅವಳೊಡನೆ ಅದೇ ಕುದುರೆಮುಖದ ಮರದ ನೆರಳೊಂದರ ಕೆಳಗೆ ಕೂತು ಅವಳ ಸ್ಪರ್ಶ ಪಡೆಯಬೇಕು ಅಂತನ್ನಿಸಿದಾಗ ಮೈ ಆ ಬೆಳಗ್ಗಿನ ಮಳೆಯ ಥಂಡಿಯಲ್ಲೂ ಬಿಸಿ ಬಿಸಿಯಾಯಿತು. ಅಯ್ಯೋ ನಂಗೆಂತ ಹುಚ್ಚಾ ಮದ್ವೆಯಾಗಿದೆ ನಂಗೆ,